*ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ*
(Kristu Jayanti Kannada Sanshodhana Patrike)
*ಸಂಪುಟ 1, ಸಂಚಿಕೆ 2, ಸೆಪ್ಟಂಬರ್ 2022, ಪುಟಗಳು 57 – 65*

# ಹರಿಸೇವೆ—ಮಣೆಸೇವೆಯಲ್ಲಿ ಮುಖವಾಡ ಪರಂಪರೆಯ ಪ್ರಭಾವ ಮತ್ತು ಪರಿಣಾಮ

**ಟಿ. ಲಕ್ಷ್ಮೀನಾರಾಯಣ**
ಸಂಶೋಧನಾರ್ಥಿ
ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಆಂಧ್ರಪ್ರದೇಶ.

ಭಾರತದಾದ್ಯಂತ ಎಲ್ಲ ರಾಜ್ಯಾಡಳಿತ ಪ್ರದೇಶಗಳಲ್ಲೂ ಒಂದಲ್ಲ ಒಂದು ಮೂಲ ಜಾನಪದ ಚಿತ್ರಕಲೆ ಅಥವಾ ಮೂಲ ಸ್ವರೂಪದ ಜಾನಪದ ಕಲೆಯೊಂದು ಇದ್ದೇ ಇರುತ್ತದೆ. ಅದಕ್ಕೆ ವಿವಿಧ ದೃಷ್ಟಿಕೋನಗಳ ಸಾಂಸ್ಕೃತಿಕ ಆಯಾಮವೂ ಇರುತ್ತದೆ. ಕೆಲವೊಮ್ಮೆ ಎರಡಕ್ಕಿಂತಲೂ ಹೆಚ್ಚು ಜಾನಪದ ಕಲಾಪ್ರಕಾರಗಳೂ ಇರುವುದುಂಟು. ಎರಡು ಮೂರು ರಾಜ್ಯಗಳಲ್ಲೂ ಸಹ ಒಂದೇ ತೆರನಾದ ಜಾನಪದ ಕಲಾಪ್ರಕಾರಗಳೂ ಇರುವುದುಂಟು. ಏಕೆಂದರೆ ಈ ಕಲಾಪ್ರಕಾರಗಳು ಹುಟ್ಟಿ ಬೆಳೆದ ಮೇಲೆಯೇ ರಾಜ್ಯಗಳು ಮತ್ತು ಜಿಲ್ಲೆಗಳು ವಿಭಜನೆಯಾಗಿರುವುದು ಇದಕ್ಕೆ ಕಾರಣ. ಕೆಲವೊಮ್ಮೆ ವಿದೇಶಿ ಕಲೆಗಳ ಪ್ರಭಾವವೂ ಈ ಕಲೆಗಳ ಮೇಲೆ ಆಗಿದ್ದು, ಮಿಶ್ರ ಅಂಶಗಳ ಕಲಾತತ್ವಗಳೂ ಕೂಡ ಹುಟ್ಟಿಕೊಂಡಿವೆ.

ಅಪ್ಪಟ ಜಾನಪದ ಚಿತ್ರಪ್ರಕಾರಗಳನ್ನು ಗಮನಿಸಿದಲ್ಲಿ ಇವುಗಳ ನಿರ್ಮಾಣಗಳಲ್ಲಿ ದೇಸೀ ತಂತ್ರಗಳ ಹೊರತಾಗಿ ಆಧುನಿಕ ತಂತ್ರಗಳನ್ನು ಎಂದೂ ಬಳಸಿಲ್ಲ. ಹಳ್ಳಿ ಅಥವಾ ಗ್ರಾಮಗಳಲ್ಲಿ ಮನೆಗಳ ನಿರ್ಮಾಣದ ಹಿಂದೆ ಮನೆಯ ಅಂಗಳ ಮತ್ತು ಒಳಗಿನ ಪ್ರದೇಶ ಸುರಕ್ಷಿತವಾಗಿದ್ದು ಸೌಂದರ್ಯ ಭರಿತವಾಗಿರಬೇಕು ಎಂಬ ಮಹತ್ತರವಾದ ಉದ್ದೇಶವೇ ಈ ಕಲಾಪ್ರಕಾರಗಳ ಜನನಕ್ಕೆ ಕಾರಣವಾಗಿದೆ.

ಆ ರೀತಿಯ ಪ್ರಕಾರಗಳಲ್ಲಿ ಭಕ್ತಿ, ಪೂಜೆ, ನೃತ್ಯ, ವಾದ್ಯಸಂಗೀತ, ಚಿತ್ರಕಲೆ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯ ಅಪರೂಪದ ಜಾನಪದ ಕಲೆಯ ಒಂದು ಪ್ರಕಾರವೇ "ಮಣೆಸೇವೆ" ಅಥವ 'ಹರಿಸೇವೆ'. ಮೂಲತಃ ಹಳೇ ಮೈಸೂರು ಸೀಮೆಯಲ್ಲಿ ಕಂಡುಬರುವ ಈ ಆರಾಧನೆ, ವೈಷ್ಣವ ಪರಂಪರೆಯ ವಿಶಿಷ್ಟ ಆಚರಣೆಯಾಗಿದೆ. ಈಗ ಆ ಆಚರಣೆಯನ್ನು ಮಾಡುವ ಸಮುದಾಯಗಳು ರಾಜ್ಯದ ಹಲವು ಭಾಗಗಳಲ್ಲಿ ವಲಸೆ ಹೋಗಿರುವುದರಿಂದ ಈಗ ಕೋಲಾರ, ಹೊಸದುರ್ಗ, ಚಿತ್ರದುರ್ಗ, ಕೊಡಗು, ಪಾವಗಡಗಳ ಭಾಗಗಳಲ್ಲಿ ಈ ಸಂಪ್ರದಾಯವು ಆಚರಣೆಯಲ್ಲಿದೆ. ಮೇಲುಕೋಟೆ ಚೆಲುವರಾಯ, ಮಾಗಡಿ ರಂಗನಾಥ, ಬಿಳಿಗಿರಿ ರಂಗಯ್ಯ, ಮುತ್ತೆತ್ತರಾಯ, ಕೆಂಗಲ್ ಹನುಮಂತರಾಯ, ಹಾಗು ತಿರುಪತಿ ವೆಂಕಟೇಶ್ವರನ ಆರಾಧಕರು ಇದನ್ನು ಶುಭ ಸಮಾರಂಭಗಳಲ್ಲಿ ಆಚರಿಸುತ್ತಾರೆ.

ಸಾಧಾರಣವಾಗಿ 'ವೈಷ್ಣವ ಕುಲ'ದ ಮನೆಗಳಲ್ಲಿ 'ಹರಿಗೆ'ಗಳನ್ನು ಪೂಜಿಸಿ ಮನೆಯ ಮುಂಭಾಗ ಅಥವಾ ದೇವಸ್ಥಾನದ ಮುಂಭಾಗ ಒಂದು ಮಡಿ ಬಟ್ಟೆಯನ್ನು ಹಾಸಿ, ಹಲಸಿನ ಹಣ್ಣು, ಬಾಳೇಹಣ್ಣು, ಕಡಲೆಪುರಿ, ಕಜ್ಜಾಯ ಮಿಶ್ರಿತ ರಸಾಯನವನ್ನು ಹಾಕಿ ಹರಿಗೆಗಳನ್ನು ಹಿಡಿದು ಅದರ ಸುತ್ತು ಕೂಗುತ್ತ ನಾ ಮುಂದು ತಾ ಮುಂದು ಎಂದು ಅದನ್ನು ತಿನ್ನಲು ಮುಂದಾಗುತ್ತಾರೆ. ಇದಕ್ಕೆ "ಮಣೇವು" ಎನ್ನುತ್ತಾರೆ. ಇದು ಹಿಂದೆ ಇದ್ದ ಬಡವರ ಅಥವಾ ಆರ್ಯ ಮತ್ತು ದ್ರಾವಿಡರ ನಡುವಿನ ಅನ್ನಕ್ಕಾಗಿ ಹಸಿವಿನ ಸಂಕೇತವಾಗಿರಬಹುದಾಗಿದೆ. ಶಂಖನಾದ, ಜಾಗಟೆ ಸದ್ದು, ಬಾಣಕಿಯ ಕೂಗಿನೊಂದಿಗೆ ಘಂಟೆ ನಾದ. ಇವೆಲ್ಲದರ ಮಧ್ಯೆ "ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನ ನೆನೆವಾರ್ತೆ" ಎಂದು ಕೇಳಿದೊಡನೆ ಹರಿಗೆ ಹಿಡಿದ ವ್ಯಕ್ತಿ ಆವೇಶ ಭರಿತನಾಗಿ "ಹೊಲ್ಯಾ ಬಹುಪರಾಕ್ ಹೊಲ್ಯಾ" ಎಂದು ಕೂಗುತ್ತ ರಸಾಯನಕ್ಕಾಗಿ ಮುಗಿಬೀಳುತ್ತಾನೆ. ಅತ್ಯಂತ ಶಿಸ್ತುಬದ್ಧವಾಗಿ ನೆಡೆಯುವ ಈ ದ್ರಾವಿಡ ಪರಂಪರೆಯ ಆಚರಣೆಯನ್ನು ನೋಡುವುದು ಮೈನವಿರೇಳಿಸುತ್ತದೆ. ಇದನ್ನು ವಿಶ್ಲೇಶಿಸುವುದಾದರೆ ಈ ಆಚರಣೆಯಲ್ಲಿ ಹರಿಗೆಗಳು ಹಾಸನ, ತುಮಕೂರು ಪ್ರಾಂತ್ಯಗಳ ಸೋಮನ ಜವಾಬ್ದಾರಿಯನ್ನೇ ಈ ಹರಿಗೆಗಳೂ ನಿರ್ವಹಿಸುತ್ತವೆ. ಊರಿಗೆ ಮತ್ತು ಆ ಊರಿನ ಕುಟುಂಬಗಳಿಗೆ ಹೊರಗಿನ ದುಷ್ಟಶಕ್ತಿಗಳಿಂದ ಯಾವುದೇ ಕೇಡು ಆಗದಂತೆ ಈ ಮುಖವಾಡಗಳು ತಡೆಯುತ್ತವೆ ಎಂಬ ಭಾವನೆ ಇವರಲ್ಲಿ ಮೂಡುತ್ತದೆ.

**ಕೊಡಗು ಜಿಲ್ಲೆಯ ಹರಿಸೇವೆ**

ಹರಿ ಸೇವೆಯನ್ನು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಒಂದು ಬಾರಿ, ತಿಂಗಳಿಗೆ ಎರಡು ಬಾರಿ, ವರ್ಷಕ್ಕೆ ಎರಡು ಅಥವ ಒಂದು ಬಾರಿ ಈ ಆಚರಣೆಯನ್ನು ಮಾಡುತ್ತಾರೆ. ಇದರಲ್ಲಿ ಮಾಂಸಾಹಾರ ಮತ್ತು ಸಸ್ಯಾಹಾರದ ಹರಿಗೆಗಳಿವೆ. ಅದನ್ನು ಅನುಸರಿಸಿ ಕೊಡಗಿನ ಗೌಡ ಜನಾಂಗದವರು ಹಿಂದಿನಿಂದಲೂ ಈ ಹರಿಸೇವೆಯನ್ನು ಆಚರಿಸುತ್ತಾ ಬಂದಿದ್ದಾರೆ. ಗೌಡರ ಕುಲದೇವರು ಶ್ರೀ ಲಕ್ಷ್ಮೀ ಸಹಿತ ವೆಂಕಟರಮಣ ಸ್ವಾಮಿಯಾಗಿದ್ದು ಪ್ರತಿ ವರ್ಷ ಹರಿಸೇವೆಯನ್ನು ಆಚರಿಸುತ್ತಾರೆ. ಇವರ ಪ್ರತಿ ಕುಟುಂಬಕ್ಕೂ ಐನ್ ಮನೆ(ಮೂಲಮನೆ) ಎಂಬುದು ಇರುತ್ತದೆ. ಐನ್ ಮನೆಯ ಬಾಡೆಯಲ್ಲಿ ದೇವರ ದೀಪವನ್ನು ಹಾಗು ಶ್ರೀವೆಂಕಟರಮಣ ದೇವರ ಭಾವ ಚಿತ್ರವನ್ನು ಇಟ್ಟು ಬೆಳಿಗ್ಗೆ ಮತ್ತು ಸಂಜೆ ಪೂಜಿಸುತ್ತಾರೆ. ಕುಟುಂಬದ ಹರಿಕೆ ಹಣವನ್ನು ಮುಡುಪಿ (ಭಂಡಾರ ಪೆಟ್ಟಿಗೆ) ನಲ್ಲಿಟ್ಟು ಬೀಗಮುದ್ರಿಸಿ ಐನ್ ಮನೆಯ ಉಪ್ಪರಿಗೆ(ಅಟ್ಟ)ಯಲ್ಲಿ ಯಾರ ಕೈಗೂ ಎಟುಕದಂತೆ ನೇತು ಹಾಕುತ್ತಾರೆ. ಇದಕ್ಕೆ ಕಾರಣ ಮುಡಿಪಿಗೆ ಮೈಲಿಗೆ ಆಗಬಾರದು, ಸೂತಕದವರು ಮುಟ್ಟಬಾರದು ಎಂಬ ಉದ್ದೇಶ. ಈ 'ಮುಡುಪು ಹಣಕ್ಕೆ ಪೂಜೆ ಸಲ್ಲಿಸಿ ದೇವರನ್ನು

ಆರಾಧಿಸುವುದನ್ನು 'ಹರಿಸೇವೆ' ಎಂದು ತಿಳಿಯಲಾಗಿದೆ. ಹರಿಸೇವೆಗಳಲ್ಲಿ 'ಹರಿಸೇವೆ' ಮತ್ತು 'ಘನ ಹರಿಸೇವೆ' ಎಂದು 2 ವಿಧ. ಹಾಗೆಯೇ 'ಮಣೆ ಹರಿಸೇವೆ' ಮತ್ತು 'ಪಾನಕ ಹರಿಸೇವೆ' ಎಂದು ಇನ್ನು ಎರಡು ವಿಧಗಳಿವೆ. ಇದನ್ನು ಶ್ರೀ ಸ್ವಾಮಿಯವರ ದಿನವಾದ ಶನಿವಾರ ಮತ್ತು ಬುಧವಾರದಂದು ಆಚರಿಸಲಾಗುತ್ತದೆ.

**ಕೊಡಗಿನ ಗೌಡರು**

**ಕೊಡಗಿನ ಗೌಡರು** ಎಂದರೆ ಭೂಮಿಗೆ ಒಡೆಯ ಎಂದರ್ಥ. ಕರ್ನಾಟಕ ರಾಜ್ಯದ ನೈಋತ್ಯ ದಿಕ್ಕಿನಲ್ಲಿರುವ ಕೊಡಗು ಜಿಲ್ಲೆ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಹಾಗೂ ಬಂಟವಾಳ ತಾಲ್ಲೂಕಿನಲ್ಲಿ ಅರೆಗೌಡರು ವಾಸಿಸುತ್ತಾರೆ. ಗೌಡರು ವಿಜಯನಗರ ಸಾಮ್ರಾಜ್ಯದಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಇದ್ದರೆಂದು ಚರಿತ್ರೆಗಳಿಂದ ತಿಳಿಯುತ್ತದೆ. ದಕ್ಶಿಣ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿದ್ದ ಗೌಡರಲ್ಲಿ ಕೆಲವರು ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಮತ್ತು ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ಕೊಡಗಿಗೆ ಬಂದು ನೆಲೆಸಿದರು. ಹತ್ತು ಕುಟುಂಬದ ಹದಿನೆಂಟು ಗೋತ್ರದ ಅರೆಭಾಷೆ ಗೌಡ ಜನಾಂಗದವರು ಸೋಬಾನೆ ಪದಗಳ ಮೂಲಕ ಕರ್ನಾಟಕ ಜಾನಪದ ಸಾಹಿತ್ಯ ರಂಗಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಮಲೆನಾಡಿನ ಸಂಸ್ಕೃತಿ ವೈಭವವನ್ನು ಹೊಂದಿದ ಅರೆಭಾಷೆಯನ್ನಾಡುವ ಕೊಡಗರು ತಮ್ಮದೇ ಆದ ಆಚರಣೆಗಳನ್ನು ಹೊಂದಿದ್ದು ಅವುಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ.

ಇವರ ಆರಾಧನೆಯ ಭೂತಗಳು ಅಥವಾ ಗಣಗಳು ಶಿವನ ಸಹಾಯಕರು ಎಂದು ನಂಬಲಾಗಿದೆ. ಭಗವಂತನನ್ನು ಸೇವಿಸುವುದು ಮತ್ತು ಧರ್ಮವನ್ನು ರಕ್ಷಿಸುವುದು ಅವರ ಮುಖ್ಯ ಜವಾಬ್ದಾರಿ ಮತ್ತು ಇಲ್ಲಿನ ಜನರಿಗೆ ಅವರ ಸಮಾಧಾನ ಬಹಳ ಮುಖ್ಯ. ಭೂತರು ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ ಮತ್ತು ಮೇ ತಿಂಗಳ ಕೊನೆಯಲ್ಲಿ ಅವರು ಪಶ್ಚಿಮ ಘಟ್ಟದ ಮೇಲೆ ವಲಸೆ ಬಂದು ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ದೀಪಾವಳಿ ಹಬ್ಬದ ಸಮಯದಲ್ಲಿ ಹಿಂತಿರುಗುತ್ತಾರೆ ಎಂದು ನಂಬಲಾಗಿದೆ. ಭೂತಗಳು ವಲಸೆ ಹೋಗುವ ಮೊದಲು ಅನೇಕ ಕುಟುಂಬಗಳು ಹರಿಸೇವೆ ಎಂಬ ಪೂಜೆಯನ್ನು ಮಾಡುತ್ತಾರೆ. ತಿರುಪತಿಯ ವೆಂಕಟರಮಣನಿಗೆ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಪೂಜೆಯ ಸಮಯದಲ್ಲಿ ವಿಶೇಷ ಪೆಟ್ಟಿಗೆಯಲ್ಲಿ ಹಣವನ್ನು ಸಂಗ್ರಹಿಸಲಾಗುತ್ತದೆ. ಒಂದು ಲೆಡ್ಜರ್ ಸಹ ನಿರ್ವಹಿಸಲ್ಪಡುತ್ತದೆ ಮತ್ತು ಅನುಕೂಲಕರವಾದಾಗ ಕುಟುಂಬ ಸದಸ್ಯರು ತಿರುಪತಿಗೆ ಹೋಗಿ ಸಂಗ್ರಹಿಸಿದ ಎಲ್ಲಾ ಹಣವನ್ನು ಆಯಾ ವರ್ಷಗಳಲ್ಲಿ ದೇವಾಲಯದ ಹುಂಡಿಯಲ್ಲಿ ಜಮಾ ಮಾಡುತ್ತಾರೆ.

ಈ ಸಮಯದಲ್ಲಿ ವಿಶೇಷ ಆಹಾರವನ್ನು ತಯಾರಿಸಲಾಗುತ್ತದೆ ಮತ್ತು ದೇವರಿಗೆ ಅರ್ಪಿಸಲಾಗುತ್ತದೆ. ವಿವಿಧ ಹಣ್ಣುಗಳನ್ನು ನೈವೇದ್ಯವಾಗಿಯೂ ಅರ್ಪಿಸಲಾಗುತ್ತದೆ. ಕಲ್ಲಂಗಡಿಗಳು, ಸೇಬು, ದ್ರಾಕ್ಷಿ ಮತ್ತು ಇತರ ಹಣ್ಣುಗಳನ್ನು ಸಹ ನೀಡಲಾಗುತ್ತದೆ. ಹರಿಸೇವೆಯ ಮುಖ್ಯ ಪ್ರಸಾದವೆಂದರೆ ಬಾಳೆಹಣ್ಣು, ತೆಂಗಿನಕಾಯಿ, ಬೆಲ್ಲ ಮತ್ತು ಹುರಿದ ಹಸಿರುಬೇಳೆ, ಪನಿವಾರಾ ಮತ್ತು ಪಾನಕಾ, ಕರಿಮೆಣಸು ಮತ್ತು ಬೆಲ್ಲದ ಪಾನಕ. ಹಣ್ಣುಗಳನ್ನು ವೆಂಕಟರಮಣನ ಪ್ರಸಾದವಾಗಿಯೂ ಸೇವಿಸಲಾಗುತ್ತದೆ. ಹರಿಸೇವೆ ಕುಟುಂಬದ ಎಲ್ಲ ಸದಸ್ಯರು ವೆಂಕಟರಮಣನಿಗೆ ಪ್ರಾರ್ಥನೆ ಸಲ್ಲಿಸುವ ಧಾರ್ಮಿಕ ಸಂದರ್ಭವಾಗಿದೆ. ಕುಟುಂಬದ ಎಲ್ಲ ಸದಸ್ಯರು ಭೇಟಿಯಾಗಲು ಇದು ಒಂದು ಕಾರಣವಾಗುತ್ತದೆ.

**ದಾಸಪ್ಪ**

ಹರಿ ಸೇವೆಯ ಈ ಕಾರ್ಯದ ಸೂತ್ರದಾರ ದಾಸಪ್ಪನೇ ಆಗಿರುತ್ತಾನೆ. ಜನರ ಕಷ್ಟಗಳನ್ನು ತೀರಿಸುವ ನಾರಾಯಣನೇ ಜನಾರ್ಧನ, ಜನರೇ ಜನಾರ್ಧನ ಜನರ ದಾಸನೇ ದಾಸಪ್ಪ. ಜನರು ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವ ತನಕ ದಾಸಪ್ಪ ಎನಿಸಿಕೊಂಡವರು ಜನರ ಒಳಿತನ್ನು ಬಯಸಿ ಸಾಲ ಮಾಡಬೇಡಿ, ದುಃಖ ಪಡಬೇಡಿ, ಆರೋಗ್ಯದ ಬಗ್ಗೆ ಗಮನ ಹರಿಸಿ ಎಂದು ಬುದ್ದಿ ಮಾತು ಹೇಳುತ್ತಿರುತ್ತಾರೆ. ಯಾವುದಾದರೂ ಮನೆಯ ಕೈಂಕರ್ಯಕ್ಕೆ ಹೋದರೆ ಮನಃಪೂರ್ವಕವಾಗಿ ಆಶೀರ್ವಾದ ಮಾಡುವ, ಒಳಿತನ್ನು ಬಯಸುವ ದಾಸಪ್ಪನವರು ತಮ್ಮ ಪಾರಂಪರಿಕ ಆಚರಣೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಹಿಂದಿನ ಕಾಲದಲ್ಲಿ ಒಂದು ಪ್ರದೇಶದ, ಒಂದು ಮನೆಯ ಯಾವುದೇ ಸುದ್ದಿಯನ್ನು ಸೂಕ್ತ ಸ್ಥಳಕ್ಕೆ ಮುಟ್ಟಿಸುವ ಕೆಲಸವನ್ನು ಅಂಚೆಯಣ್ಣ ಮಾಡುತ್ತಿದ್ದರು. ಭಾರತವಲ್ಲದೆ ಬೇರೆ ಯಾವ ದೇಶದಲ್ಲೂ ಇಲ್ಲದ ದಾಸ ಸಂಸ್ಕೃತಿ ವಿಶೇಷವಾಗಿದ್ದು ತುಂಬಾ ಉನ್ನತ ಮಟ್ಟದ್ದಾಗಿದೆ. ಅಖಂಡ ದೀಪ ಹಿಡಿದು ಮೂರು ನಾಮ ಬಳಿದುಕೊಂಡು, ಆಯುರ್ವೇದದ ಜ್ಞಾನವನ್ನೂ ಹೊಂದಿದ್ದು ಮಹಿಳೆ ಮತ್ತು ಮಕ್ಕಳಿಗೆ ತಮ್ಮ ಜೋಳಿಗೆಯಲ್ಲಿ ಔಷಧಿಗಳನ್ನು ತುಂಬಿಕೊಂಡು ಸಾರ್ವಜನಿಕವಾಗಿ ಔಷಧೀಯ ಮಾರ್ಗದರ್ಶನ ನೀಡುವವರು ಈ ದಾಸಪ್ಪರು. ವಿಭೂತಿಯೂ ಅಯುರ್ವೇದದ ಔಷಧೀಯ ಅಂಶ ಇರುವ ವಸ್ತು ಅದನ್ನೂ ಸೂಕ್ತ ರೀತಿಯಲ್ಲಿ ಜನರಿಗೆ ಹಂಚುತ್ತಿದ್ದವರು. ಜನರು ದಾಸಯ್ಯನ ಮೂಲಕ ದೇವರಿಗೆ ಮೊರೆ ಹೋಗುವ ಕಾರ್ಯವನ್ನು ನಂಬುತ್ತಾರೆ. ದಾಸಪ್ಪನ ಜೊತೆ ಮಾತನಾಡಿದರೆ ದೈವದ ಜೊತೆಯಲ್ಲೇ ಮಾತನಾಡಿದಂತೆ ಎಂದು ಭಾವಿಸುತ್ತಾರೆ. ದಾಸಯ್ಯ ನಾರಾಯಣ ಮಂತ್ರವನ್ನು ಹೇಳಿದರೆ ಸಾಕು ಜನರಲ್ಲಿ ಚೈತನ್ಯ ತುಂಬಿ ತಮ್ಮ ಕಷ್ಟಗಳೆಲ್ಲಾ ಪರಿಹಾರವಾಗುತ್ತವೆ ಎಂದು ಭಾವಿಸುತ್ತಾರೆ.

**ಹರಿಗೆ ಸಿದ್ಧ ಮಾಡುವ ಬಗೆ**

ಇವು ನೋಡಲು ಮುಖವಾಡಂತೆ ಕಂಡು ಬಂದರೂ ಅದು ಗುರಾಣಿಯಂಥ ಹಲಗೆಯಾಗಿದೆ. ಇವುಗಳಲ್ಲಿ ಕಪ್ಪು ಹಾಗೂ ಕೆಂಪು ಎಂಬ ಎರಡು ಬಗೆಯ ಮುಖವಾಡಗಳಿದ್ದು ವೃತ್ತಾಕಾರದ ವಿನ್ಯಾಸದಲ್ಲಿ ಇವುಗಳನ್ನು ಸಿದ್ಧಪಡಿಸುತ್ತಾರೆ. ಇದನ್ನೇ ಮಣೆಸೇವೆಮಾಡುವ ಭಕ್ತರು "ಹರಿಗೆ" ಎಂದು ಕರೆಯುತ್ತಾರೆ. ‘ಮೊದಲೆಲ್ಲಾ ರಕ್ತ ಬೂತಾಳೆ ಮತ್ತು ಕರಿ ಬೂತಾಳೆ ಮರದಲ್ಲಿ ಸಿದ್ಧಪಡಿಸಿ ಮಾಡುತ್ತಿದ್ದ ಹರಿಗೆಗಳನ್ನು ಆ ಮರಗಳ ಅಭಾವದಿಂದ ಈಗ ಹತ್ತಿಮರದಿಂದ ಮಾಡುತ್ತಾರೆ. ಮೊದಲೆಲ್ಲಾ ಕೆಂಪು ಬೂತಾಳೆ ಮರವನ್ನು ಕಡಿಯುವ ಮೊದಲು ಎಲ್ಲರೂ ಆ ಮರದ ಬಳಿ ಹೋಗಿ ಅದಕ್ಕೆ ಪೂಜೆ ಸಲ್ಲಿಸಿ ಒಂದು ಮರದ ತುಂಡನ್ನು ನೀಡಿ ಎಂದು ಬೇಡಿ ಮರದ ತುಂಡನ್ನು ಕತ್ತಿರಸಿಕೊಂಡು ಹೋಗುವುದು ಪ್ರತೀತಿ. ಕಪ್ಪು ಬೂತಾಳೆ ಮರದಿಂದ ಕರಿಯಣ್ಣನನ್ನು ಕೆಂಪು ಬೂತಾಳೆ ಮರದಿಂದ ಕೆಂಚಣ್ಣನನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಆದರೆ ಈಗ ಹತ್ತಿ ಮರದಿಂದ ತಯಾರಿಸಿಕೊಳ್ಳುತ್ತಾರೆ. ತುಂಬಾ ಭಾರವಾಗಿಯೂ ಇಲ್ಲದೆ ತುಂಬಾ ಹಗುರವಾಗಿಯೂ ಇಲ್ಲದೆ ವಿಸ್ತಾರವಾಗಿ ಕಾಣುವ ರೀತಿಯಲ್ಲಿ ವೃತ್ತಾಕಾರವಾಗಿ ಕತ್ತರಿಸಿಕೊಳ್ಳುತ್ತಾರೆ. ಇದಕ್ಕೆ ಹಿಡಿಯೊಂದನ್ನು ಭದ್ರವಾಗಿ ಜೋಡಿಸುತ್ತಾರೆ. ಮರವಜ್ರವನ್ನು ಕುದಿಸಿ ಅದರಿಂದ ಬಂದ ಅಂಟಿನಿಂದ ಹತ್ತಿ ಬಟ್ಟೆಯನ್ನು ಅಂಟಿಸುತ್ತಾರೆ. ಹುಣಿಸೆ ಬೀಜದ ಪುಡಿಯನ್ನು ಚೆನ್ನಾಗಿ ಕುದಿಸಿ ಅಂಟನ್ನಾಗಿ ಮಾಡಿಕೊಂಡು, ಅದಕ್ಕೆ ಚಾಕ್ ಪೌಡರನ್ನು ಅಥವ ಸುಣ್ಣದ ಪುಡಿಯನ್ನು ಮಿಶ್ರಣ ಮಾಡಿಕೊಳ್ಳುತ್ತಾರೆ. ಆ ಮಿಶ್ರಣವನ್ನು ಸಿದ್ಧಪಡಿಸಿಕೊಂಡ ಮರದ ಹಲಗೆಗೆ ಚೆನ್ನಾಗಿ ಹಚ್ಚಿ ಉಪ್ಪುಕಾಗದ ಅಥವ ತೆಂಗಿನ ನಾರಿನಿಂದ ನುಣುಪು ಬರುವಂತೆ ಉಜ್ಜುತ್ತಾರೆ. ಕಣ್ಣಿನ ಉಬ್ಬು, ಮೀಸೆ, ಕೋರೆಹಲ್ಲು ನಾಮ, ಮೂಗು, ಪ್ರಭಾವಳಿಗಳು ಉಬ್ಬಿದಂತೆ ಕಾಣಲು ಮತ್ತು ಅದರ ವಿನ್ಯಾಸಕ್ಕಾಗಿ ಮರದ ಅಂಟು ಮತ್ತು ಚಾಕ್ ಪೌಡರ್‌ನ್ನು ದೋಸೆ ಹಿಟ್ಟಿನ ಹದದಲ್ಲಿ ಮಿಶ್ರಣ ಮಾಡಿ ನಿಗಧಿತ ಆಕಾರದೊಳಗೆ ಹಚ್ಚಿಕೊಳ್ಳುತ್ತಾರೆ. ಒಣಗಿದ ನಂತರ ಹೊಳೆಯುವ ಚಿನ್ನದ ಹಾಳೆಗಳಿಂದ ಚಿನ್ನದ ಆಭರಣವನ್ನು ಹೋಲುವಂತೆ ಬೇಕಾದ ಕಡೆಯಲ್ಲಿ ಹಚ್ಚಿ ನಂತರ ನೆಲಮೂಲದ ಬಣ್ಣಗಳಿಂದ ವಿನ್ಯಾಸವನ್ನು ಮಾಡುತ್ತಾರೆ. ‘ಹರಿಗೆಗಳನ್ನು ಭೂತಗಳು ಅಥವಾ ಗಣಗಳು ಎಂದು ಭಾವಿಸುತ್ತ ಶಿವನ ಸಹಾಯಕರೆಂದು ಭಾವಿಸುತ್ತಾರೆ. ಇದೇ ಸಮೀಕರಣವನ್ನು ಸೋಮಗಳು ಚಾಮುಂಡಿಯ ಸೇವಕರು ಎಂದು ಈ ಹಿಂದೆ ಮುಖವಾಡಗಳ ಅಂಶವನ್ನು ಚರ್ಚಿಸುವಾಗ ದಾಖಲಿಸಲಾಗಿದೆ. ಭಗವಂತನನ್ನು ಸೇವಿಸುವುದು ಮತ್ತು ಧರ್ಮವನ್ನು ರಕ್ಷಿಸುವುದು, ಜನರ ಕ್ಷೇಮವನ್ನು ಕಾಪಾಡುವುದು ದೈವಗಳ ಜವಾಬ್ದಾರಿ

ಎಂದು ನಂಬಿಕೆಯಾಗಿದೆ. ವಿಷ್ಣುವಿನ ದ್ವಾರ ಪಾಲಕರಾದ ಜಯ ವಿಜಯರು – ಹಿರಣ್ಯಕಶ್ಯಪು ಹಾಗೂ ಹಿರಣ್ಯಾಕ್ಷರು ಇವರೇ ಎಂದು ಹೇಳಲಾಗುತ್ತದೆ. ಕರಿಯಣ್ಣ ಹರಿಗೆಯು ಹಿರಣ್ಣ್ಯಾಕ್ಷನಾಗಿರುವುದರಿಂದ ಆ ಹರಿಗೆಗೆ ತುಂಬಾ ಕೋಪ, ಉಗ್ರ ರೂಪ ಹೆಚ್ಚಿಗಿದ್ದು ಅವರನ್ನು ಹಿಡಿಯಲು ಎರಡು ಮೂರು ಮಂದಿ ಬೇಕಾಗುತ್ತದೆ ಎಂದು ಹೇಳುತ್ತಾರೆ.

**ಮುಖವಾಡಗಳ ಧನಾತ್ಮಕ ಉತ್ಸಾಹ**

ಸಂಸ್ಕೃತಿಗಳು ವರ್ಣರಂಜಿತ, ಭವ್ಯ ಮತ್ತು ಭಯಾನಕ ಭಾವಗಳಾಗಿವೆ. ತಮ್ಮದಲ್ಲದ ಬೇರೆ ಮುಖವಾಡವನ್ನು ಧರಿಸಿಕೊಂಡು ಕೆಲವೊಂದು ವಿಶೇಷ ರಾತ್ರಿಗಳಲ್ಲಿ, ವಿಶೇಷ ಸಂದರ್ಭಗಳಲ್ಲಿ ದೈವತ್ವವನ್ನು ಆವಾಹಿಸಿಕೊಂಡು ಅಸೀಮರಾಗುತ್ತವೆ. ಕುಟ್ಟಿ ನಳಿಕೆ, ಬೆಲತಂಗಡಿಯ ಕಿಟ್ಟು ಪರ್ವಾ, ಬಂಟ್ವಾಳದಿಂದ ಗೋಪಾಲ್ ಪಂಬಡ, ಕನ್ನಡದ ಗುರುವಾ ನಳಿಕಾ ಮತ್ತು ನಿಡ್ಲೆ ಮೂಲದ ಲಿಂಗಪ್ಪ ನಲಿಕಾ ಎಲ್ಲರೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರಾಗಿದ್ದು, ಆದರೆ ಕೈಯಲ್ಲಿ ಬಣ್ಣವನ್ನು ಹಿಡಿದು ಕನ್ನಡಿಯ ಮುಂದೆ ಕುಳಿತರೆ, ಅವರ ಮುಖಗಳು ಉಗ್ರರೂಪದ ವರ್ಣಗಳನ್ನು ಪಡೆದುಕೊಳ್ಳುತ್ತವೆ, ಕ್ಷಣದಲ್ಲಿ ರೂಪಾಂತರಗೊಳ್ಳುತ್ತಾರೆ. ಗಾಢ ಹಳದಿ, ಕಪ್ಪು, ಕೆಂಪು ಅವರ ಮಾತು ಆ ಮುಖವರ್ಣಿಕೆಗೆ ಮತ್ತು ಆ ಮೂಲ ಪಾತ್ರಕ್ಕೆ ಹೊಂದುವಂತೆ ಅಧಿಕೃತವಾಗುತ್ತದೆ. ಅವರಿಗೇ ಅರಿವಿಲ್ಲದಣತೆ ಅವರ ಕಣ್ಣುಗಳು ಉದ್ರಿಕ್ತವಾಗಿ ಬೆಳಗಿ, ದೇಹವು ಉದ್ರಿಕ್ತವಾಗಿ ಅಭಿವ್ಯಕ್ತಿಗೆ ಒಳಗಾಗುತ್ತಾರೆ. ಕೂಡಲೆ ಅವರು ತುಳು ಜಾನಪದ ಪದ್ಯಗಳಾದ ಪಾಡ್ದನಗಳನ್ನು ಹಾಡಲು ಪ್ರಾರಂಭಿಸುತ್ತಾರೆ. ಭೂತಗಳು ಕ್ಷಣಮಾತ್ರದಲ್ಲಿ ಶಕ್ತಿಯುತ, ಅತಿಮಾನುಷ, ಜೀವಿಗಳಾಗಿ ಅಲ್ಪಾವಧಿಯಲ್ಲೇ ಭಕ್ತರಿಂದ ಮತ್ತು ಸಾರ್ವಜನಿಕರಿಂದ ದೈವಿಕ ಸ್ಥಾನಮಾನವನ್ನು ಪಡೆದುಕೊಳ್ಳುತ್ತವೆ.


1


2



3


4


5


6

1. ಅತ್ಯಂತ ಉಘ್ರ ಎಂದು ಭಾವಿಸುವ ಕರಿಯಣ್ಣ ಎಂದು ಕರೆಯುವ ಕಪ್ಪು ಹರಿಗೆ
2. ಕರಿಯಣ್ಣ ಮತ್ತು ಕೆಂಚಣ್ಣರನ್ನು ಪೂಜಾ ವಿಧಾನ ಆರಂಭಿಸುವ ಮುನ್ನ ಅಲಂಕರಿಸಿರುವುದುವ
3. ಹರಿಗೆಗಳನ್ನು ಹೊರುವ ಹರಿಸೇವಕರು ಪೂಜೆಯಲ್ಲಿ ಕುಳಿತಿರುವುದು
4, 5, 6. ಪೂಜಾ ಕಾರ್ಯ ನಡೆದ ನಂತರ ಹರಿಗೆಯನ್ನು ಧರಿಸಿದ ಹರಿಸೇವಕರು ಮತ್ತು ಪೂಜಾ ಕಾರ್ಯ




[1]

[1] ಯೋಗೇಶ. ಎನ್. ಕೋರಣ್ಯ ಕಲಾತಂಡದ ಮುಖ್ಯಸ್ಥರನ್ನು ಸಂದರ್ಶಿಸಿದಾಗ ಸಂಗ್ರಹಿಸಿದ ಮಾಹಿತಿ.

ತುಳು ಸಂಸ್ಕೃತಿಯನ್ನು ಯಾವಾಗಲೂ ಭೂತಾರಾಧನೆ ಮತ್ತು ಯಕ್ಷಗಾನದಿಂದ ರೂಪಿಸಲಾಗಿದೆ ಎಂದು ಪ್ರಸಿದ್ಧ ಜಾನಪದ ವಿದ್ವಾಂಸ ಮತ್ತು ಬರಹಗಾರ ಅಮೃತ್ ಸೋಮೇಶ್ವರ ಅವರು ಪ್ರತಿಪಾದಿಸುತ್ತಾರೆ. ಇದು ಭೂತಗಳ ವಿಸ್ಮಯ ಮತ್ತು ಅದ್ಭುತ ಜಗತ್ತಿನ ಹೊಸ ಆಯಾಮದ ದೃಷ್ಟಿಕೋನವಾಗಿದೆ. ಭೂತಾರಾಧನೆಯನ್ನು ಪುಷ್ಟೀಕರಿಸಲು ಬಣ್ಣಗಳು ಒಂದು ಪ್ರಮುಖ ಮಾನದಂಡವಾಗಿದೆ. ಭೂತದ ಪಾತ್ರವನ್ನು ಚಿತ್ರಿಸುವಲ್ಲಿ ವೈಯಕ್ತಿಕ ಬಣ್ಣಗಳು ಮತ್ತು ಅವುಗಳ ದ್ವಿತೀಯ ವರ್ಗದ ಛಾಯೆಗಳು ಪ್ರಮುಖ ಅಂಶಗಳಾಗಿವೆ. ಭೂತಾರಾದನೆಯ ಕಲಾವಿದರು ಮೊದಲು ತಮ್ಮ ಮುಖಗಳಿಗೆ ಬಣ್ಣ ಬಳಿದುಕೊಳ್ಳುವ ಮೂಲಕ ಬೇರೆಯ ಭೂತಗಳಿಗೆ ಮುಖವರ್ಣಿಕೆ ಮಾಡುವ ಕೆಲಸವನ್ನು ಪ್ರಾರಂಭಿಸುತ್ತಾರೆ.

ಭೂತದ ವೇಷ ಹಾಕಿದ ಪಾತ್ರಗಳು ಮತ್ತು ಆಯೋಜಕರು ಜನರ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಭೂತ ಪೂಜೆಯನ್ನು ಮಾಡುತ್ತಾರೆ. ಸಾಮಾನ್ಯವಾಗಿ ಹೊರಾಂಗಣದಲ್ಲಿ ಕತ್ತಲೆಯಲ್ಲಿ ನಡೆಸಲಾಗುವ ಈ ಭೂತದ ಪೂಜೆಗೆ ತುಳುವರು ಬಹುಸಂಖ್ಯೆಯಲ್ಲಿ ಸೇರಿ ಹೆಚ್ಚಿನ ಪ್ರಾಮುಖ್ಯತೆ ನೀಡುವರು. ಆದರೆ ಭೂತದ ಪೂಜೆಯು ಬೇರೆ ಯಾವುದೇ ಉತ್ಪ್ರೇಕ್ಷೆಗೆ ಒಳಗಾಗದೆ ಅತಿ ಸರಳವಾಗಿ ಸಮುದಾಯಗಳನ್ನು ಒಂದುಗೂಡಿಸುತ್ತದೆ ಮತ್ತು ಒಗ್ಗಟ್ಟಿನಿಂದ ಇರುವಂತೆ ಮಾಡುತ್ತದೆ. ಎಲ್ಲಾ ಜಾತಿಗಳಿಗೆ ಇಲ್ಲಿ ಸ್ಥಾನವಿದ್ದು, ಭೂತಗಳನ್ನು ಪೂಜಿಸುವುದು ಶಕ್ತಿ ಅಥವಾ ಚೈತನ್ಯದ ಸಂಕೇತವಾಗಿದೆ. ಮರಣಾನಂತರದ ಜೀವನದ ಬಗ್ಗೆ ಸ್ಥಳೀಯರಲ್ಲಿ ಅಪಾರವಾದ ನಂಬಿಕೆಯನ್ನು ಇದ್ದು ಸತ್ತವರೊಂದಿಗೆ ಸಂವಹನ ನಡೆಸುವ ಬಯಕೆಯನ್ನು ತೋರುತ್ತಿರುತ್ತಾರೆ. ಇದು ಅಲೌಕಿಕವಾದ ನಂಬಿಕೆಗಳನ್ನು ಲೌಕಿಕ ಪ್ರಜ್ಞೆಯಲ್ಲಿ ವ್ಯಕ್ತಪಡಿಸುವ ಸಂಪ್ರದಾಯದ ಗಂಭೀರವಾದ ಆಚರಣೆ ಎಂದು ಕೆ. ಚನ್ನಪ್ಪ ಗೌಡ ಹೇಳುತ್ತಾರೆ.

ಈ ನಿಟ್ಟಿನಲ್ಲಿ 'ಜಾನಪದ ಕಥೆಗಳಲ್ಲಿ ಪೌರಾಣಿಕ ಯೋಧರಾದ ಕೋಟಿ ಚೆನ್ನಯ್ಯ, ಕಲ್ಕುಡಾ, ಕಲ್ಲುರ್ತಿ ಮತ್ತು ಕೊರಗಜ್ಜ, ತನಿಯರಲ್ಲದೆ, ಹಾವು ಮತ್ತು ಹುಲಿಯಂತಹ ಜೀವಿಗಳನ್ನು ಕೂಡ ಬಹಳ ಭಯಭಕ್ತಿಯಿಂದ ಸೇವಿಸುತ್ತಾರೆ. ಎಷ್ಟು ಭೂತಗಳಿವೆ ಎಂದು ನಿಖರವಾದ ಮಾಹಿತಿ ಇಲ್ಲದಿದ್ದರೂ ಒಂದು ಗಣತಿಯ ಪ್ರಕಾರ 356 ಭೂತಗಳನ್ನು ಗುರುತಿಸಲಾಗಿದ್ದು ಈ ಪ್ರತಿಯೊಂದು ಭೂತಗಳಲ್ಲಿ 16 ರೂಪಗಳು ಅಥವಾ ಅವತಾರಗಳಿವೆ. ಎಲ್ಲಾ ಭೂತಗಳು ತುಳು ಭಾಷೆಯಲ್ಲಿ ಮಾತನಾಡುತ್ತವೆ, ಅವುಗಳಲ್ಲಿ ಕೆಲವರು ಕನ್ನಡವನ್ನೂ ಮಾತನಾಡುತ್ತಾರೆ.'[2] ಅವುಗಳಲ್ಲಿ ಕೆಲವು ಶ್ರೀಮಂತ ಭೂತಗಳು, ಕೆಲವು ಪ್ರಾಣಿಗಳು ಮತ್ತು

[2] ಜಿ. ಎನ್. ಮೋಹನ್, ಡೆಕ್ಕನ್ ಹೆರಾಲ್ಡ್, 10–07–93 ಪುಟ : 5

ಕೆಲವು ಮಹಿಳಾ ಭೂತಗಳು ಪ್ರದರ್ಶಿತವಾಗಿವೆ. ಭೂತಗಳ ಮುಖವರ್ಣಿಕೆಗಳು ಪೀಳಿಗೆಯಿಂದ ಪೀಳಿಗೆಗೆ ಗುರುತರವಾಗಿ ಬದಲಾಗಿದ್ದು ಇವುಗಳಲ್ಲಿ ವಿವಿಧ ಪ್ರಕಾರಗಳಿದ್ದು ಪರವಾ, ಪಂಬಡ ಮತ್ತು ನಲಿಕಾ ಭೂತಗಳಿವೆ. ಇವುಗಳಿಂದ ಹೆಚ್ಚಿನ ಭೂತಗಳು ತಮ್ಮನ್ನು ತಾವು ವಿಭಿನ್ನವಾಗಿ ರೂಪಿಸಿಕೊಳ್ಳುತ್ತವೆ. ಭೂತಗಳಲ್ಲಿ ಇರುವ ಪಾಡ್ದನಗಳು, ವ್ಯಕ್ತಿತ್ವಗಳು, ಅವುಗಳ ಮುಖವರ್ಣಿಕೆಯಲ್ಲಿನ ಪ್ರಬಲ ಬಣ್ಣಗಳು ಮತ್ತು ಯಕ್ಷಗಾನದ ಮುಖವರ್ಣಿಕೆಯ ನಡುವೆ ಭಿನ್ನತೆಗಳನ್ನು ಕಾಣಬಹುದಾಗಿದೆ.

ವರ್ಣಸಂಕರದ ಹಾಗೆ ಕಲಾಸಂಕರ ಮತ್ತು ಜಾನಪದ ಚಿತ್ರಸಂಕರಗಳು ಕೂಡ ಆಗಿವೆ. ಇವು ದೇಶ–ವಿದೇಶ, ರಾಜ್ಯ–ಅಂತರರಾಜ್ಯ, ಜಿಲ್ಲೆ–ಅಂತರಜಿಲ್ಲೆ, ಗ್ರಾಮ–ಅಂತರಗ್ರಾಮ ಮತ್ತು ವ್ಯಕ್ತಿ–ಪ್ರತಿವ್ಯಕ್ತಿಗಳ ನಡುವೆ ಆದ ಬೌದ್ಧಿಕ ಸಂಲಘ್ನವನ್ನೇ ಕಲಾ ಸಂಕರ ಎಂದು ಪ್ರತಿಪಾದಿಸಲಾಗುತ್ತಿದೆ. ಜನ ಸಮುದಾಯದ ವಾಸಸ್ಥಾನಗಳು, ಸಮುದಾಯಗಳ ಜೀವನಕ್ರಮ, ವಾತಾವರಣಕ್ಕೆ ಹೊಂದಿಕೊಂಡಂತೆ ವಿಭಿನ್ನ ಜನಾಂಗಗಳ ಒಳಸಂಬಂಧಗಳನ್ನು ಬೆಸೆದು ನಿರ್ಮಿಸಲ್ಪಟ್ಟ ಕಲಾಪ್ರಕಾರಗಳು ಅಧ್ಯಯನ ಮಾಡಲು ಒಂದಕ್ಕೊಂದು ಪೂರಕವಾಗಿವೆ. ಹರಿಸೇವೆ__ಮಣೆಸೇವೆಯಲ್ಲಿಯೂ ಕೂಡ ಮುಖವಾಡ ಪರಂಪರೆಯ ಪ್ರಭಾವ ಮತ್ತು ಪರಿಣಾಮಗಳನ್ನು ಕಲಾತ್ಮಕ ಮತ್ತು ಪರಿಣಾಮಾತ್ಮಕವಾಗಿ ಗ್ರಹಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**

1. ಆಧುನಿಕ ಆದಿಮ., ಟಿ. ಗೋವಿಂದರಾಜು., 2019., ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು
2. ಕರ್ನಾಟಕ ಜನಪದ ಕಲೆಗಳ ಕೋಶ., ಹಿ.ಚಿ. ಬೋರಲಿಂಗಯ್ಯ., 2002., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಜಾನಪದ
4. ಸಾಂಸ್ಕೃತಿಕ ಆಯಾಮಗಳು., ಹಿ.ಶಿ. ರಾಮಚಂದ್ರೇಗೌಡ., 1998., ಕನ್ನಡ ಪುಸ್ತಕ ಪ್ರಾಧಿಕಾರ., ಕನ್ನಡ ಭವನ, ಬೆಂಗಳೂರು 02.